**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಕೆ.ಆರ್.ನಗರ**

**ಸಿಮಿಸ್ 221/2017**

ಪಿಡಬ್ಲ್ಯೂ -1

**ಸಾಕ್ಷಿಯನ್ನು ದಿನಾಂಕ 11.09.2019 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಜಿ ಆರ್ ವಕೀಲರಿಂದ ವಾದಿ ಪರ ವಕೀಲರುಃ**

ನಾನು ನನ್ನ ಅರ್ಜಿಯೊಂದಿಗೆ ಸಲ್ಲಿಸಿದ ಆರ್ ಟಿ ಸಿಗಳಾದ ನಿಪಿ 4 ರಿಂದ 13 ಇವುಗಳು ಎದುರುದಾರರಿವರಿಗೆ ಸಂಬಂದಪಟ್ಟದ್ದು ಅಲ್ಲ ಎಂದರೆ ಸಾಕ್ಷಿಯು ಹೌದು ಅವರ ತಾತನವ ಆಸ್ತಿ ಎಂದು ನುಡಿಯುತ್ತಾರೆ.

ಎದುರುದಾರ ಇವರ ತಾತನಿಗೆ 3 ಜನ ಮಕ್ಕಳು. ಅವರೆಲ್ಲರೂ ಈಗ ಇದ್ದಾರೆ ಎಂದರೆ ಸರಿ. ನನಗೆ ಅತ್ತೆ ಹಾಗೂ ಮಾವ ಇದ್ದಾರೆ. ಎದುರುದಾರರಿವರ ತಂದೆ ತಾಯಿಗೆ ಎದುರುದಾರರನ್ನು ಹೊರತುಪಡಿಸಿದರೆ ಇನ್ನೊಬ್ಬ ಗಂಡು ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ.

ನಾನು ಎದುರುದಾರ, ಅವರ ತಂದೆ ತಾಯಿ, ಅವರ ಇನ್ನೊಬ್ಬ ಮಗ ಹಾಗೂ ಹೆಣ್ಣು ಮಕ್ಕಳಿಗೆ ಸಂಬಂದಪಟ್ಟ ಆಸ್ತಿಯ ಯಾವುದೇ ದಾಖಲಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಆದರೆ ಈ ಹಿಂದೆ ನಾನು ಸದರಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಗ್ಯಕರವಾಗಿರುತ್ತೇನೆ.

ನಮಗೆ ಮಕ್ಕಳಿರುವುದಿಲ್ಲ. ನಾನು ಹಾಗೂ ಎದುರುದಾರರ ನಡುವೆ ಯಾವುದೇ ರೀತಿಯ ವೈವಾಹಿಕ ಜೀವನ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದೇನೆ ಎಂದು ತಿಳಿಸಿದ್ದು ನಾನು ಆ ರೀತಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಆರೋಗ್ಯಕ್ಕೆ ಸಂಬಂದಪಟ್ಟಂತಹ ಯಾವುದೇ ಮಾಹಿತಿಯನ್ನು ಅರ್ಜಿಯಲ್ಲಿ ಬರೆಯಲು ನೀಡಿರುವುದಿಲ್ಲ. ನಾನು ಈ ಅರ್ಜಿಯಲ್ಲಿ ಹೇಳಿದ ರೀತಿ ಯಾವುದೇ ಮಾಹಿತಿ ನೀಡಿರುವುದಿಲ್ಲ. ಸದರಿ ಅರ್ಜಿಯನ್ನು ವಕೀಲರ ಕೋರಿಕೆಯ ಮೇರೆಗೆ ನಿಆರ್ 1 ಎಂದು ಗುರುತಿಸಲಾಯಿತು.

ನಾನು ನಿಆರ್ 1 ನ್ನು ಸಲ್ಲಿಸುವ ಮುನ್ನ ಯಾವುದೇ ಸಂಸ್ಥೆ ಹಾಗೂ ಪೋಲೀಸ್ ಠಾಣೆಯ ಮುಂದೆ ಹಾಜರಾಗಿ ನಾನು ಹೇಳಿದ ರೀತಿ ದೂರನ್ನು ಬರೆದುಕೊಳ್ಳಿರಿ ಎಂದು ಹೇಳಿ ಬರೆಸಿಲ್ಲ ಎಂದರೆ ಸಾಕ್ಷಿಯು ಬರೆಸಿದ್ದೇನೆ ಮುಂದುವರೆದು ಪೋಲೀಸ್ ಠಾಣೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರ ಮುಂದೆ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ನಿಪಿ 1 ರಲ್ಲಿ ಎದುರುದಾರರಿವರಿಗೆ 50 ಚಿನ್ನವನ್ನು ನೀಡಿರುವ ಬಗ್ಗೆ ಹೇಳಿದ್ದು ಆದರೆ ನನ್ನ

ದಿಃ06.02.2016 ರ ಸಾಕ್ಷಿಯಲ್ಲಿ ನಾನು ಎದುರುದಾರರಿವರಿಗೆ 500 ಗ್ರಾಂ ಚಿನ್ನವನ್ನು ನೀಡಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

ನಿಪಿ 1 ರಲ್ಲಿ "ಮಾರಗೌಡನ ಹಳ್ಳಿ ಗ್ರಾಮದಲ್ಲಿ ನಡೆದ ಪಂಚಾಯತಿಯಲ್ಲಿ ಪತಿ ಅರುಣ್ ಕುಮಾರ್, ಅಜ್ಜಿ ತಾತರವರು ಮನಬಂದಂತೆ ಬೈದಿದ್ದು" ಎಂದು ಹೇಳಿದ್ದು ಆ ರೀತಿ ಯಾವ ದಿನಾಂಕ ಯಾವ ತಿಂಗಳು ಹಾಗೂ ಯಾವ ಸಮಯದಂದು ಮಾಡಿದ್ದರು ಎಂದು ಹೇಳಲಾಗುವುದಿಲ್ಲ.

ನಾನು ಮದುವೆಯ ನಂತರ ಎದುರುದಾರರ ಮನೆಯಲ್ಲಿ 3 ದಿನ ಮಾತ್ರ ವಾಸವಾಗಿದ್ದೆ ಎಂದರೆ ಸಾಕ್ಷಿಯು ಒಂದು ತಿಂಗಳು ವಾಸವಿದ್ದೆ ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿ ನಾನು ಎದುರುದಾರರ ಮನೆಯಲ್ಲಿ ಕೇವಲ 3 ದಿನ ಮಾತ್ರ ವಾಸವಾಗಿದ್ದೆ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ